**ಕರ್ನಾಟಕ ಸರ್ಕಾರ**

**(ಕಂದಾಯ ಇಲಾಖೆ)**

**ಉಪತಹಶೀಲ್ದಾರವರ ನ್ಯಾಯಾಲಯ ನಾಡ ಕಛೇರಿ ಕೊಟ್ಟೂರು**

**ಸಂ/ಕಂ/ಹ.ಬ.ನಾಕಕೊ/14/2016-17.** **ದಿನಾಂಕ:07-06-2016.**

| ವಾದಿಗಳು | ಪ್ರತಿವಾದಿಗಳು |
|---|---|
| 1)ಎಂ.ಪ್ರಕಾಶ ತಂದೆ ಲೇಟ್ ಎಂ.ಮಲ್ಲಪ್ಪ<br>ಕೊಟ್ಟೂರು ಪಟ್ಟಣ<br>2)ಬಿ.ಶಿವಮೂರ್ತಿ ತಂದೆ ಲೇಟ್ ಬಿ.ನಾಗಪ್ಪ<br>ಕೊಟ್ಟೂರು ಪಟ್ಟಣ<br>ಕೂಡ್ಲಿಗಿ ತಾಲೂಕು | ಕಂದಾಯ ಪರಿವೀಕ್ಷಕರು<br>ಕೊಟ್ಟೂರು |

ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 383ಬಿ. ವಿಸ್ತೀರ್ಣ 3-55 ಎಕ್ರೆ ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ.

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 383ಬಿ. ವಿಸ್ತೀರ್ಣ 3-55 ಎಕ್ರೆ ಜಮೀನನ್ನು ಸದರಿ ತಾಲೂಕು ಕೊಟ್ಟೂರು ಪಟ್ಟಣದ ಬಿ.ಶಿವಮೂರ್ತಿ ತಂದೆ ಲೇಟ್ ಬಿ.ನಾಗಪ್ಪ ಇವರಿಂದ ಸದರಿ ತಾಲೂಕು ಕೊಟ್ಟೂರು ಪಟ್ಟಣದ ಎಂ.ಪ್ರಕಾಶ ತಂದೆ ಲೇಟ್ ಎಂ.ಮಲ್ಲಪ್ಪ ಇವರು ದಿನಾಂಕ 31-12-2014 ರ ಡಾಕ್ಯುಮೆಂಟ್ ನಂಬರ್: 3425/2014-15 ರ ಪ್ರಕಾರ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಜೋಳದಕೂಡ್ಲಿಗಿ ಇವರು ನಮೂನೆ-21 ರ ನೋಟಿಸನ್ನು ದಿನಾಂಕ 26-01-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ವಿಕ್ರಯದಾರರು ಸಹಿ ಮಾಡಲು ನೀರಾಕರಿಸಿರುವ ಕಾರಣ ಈ ಪ್ರಕರಣದ ಎಂ.ಆರ್.ನಂಬರ್: 37/2014-15 ದಿನಾಂಕ 26-02-2015 ರಲ್ಲಿ ತಕರಾರು ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದೆಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸು ನೀಡಿ ದಿನಾಂಕ 31-05-2016 ರಿಂದ 07-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಜೋಳದಕೂಡ್ಲಿಗಿ ಗ್ರಾಮದ ಸನಂ 383ಬಿ. ವಿಸ್ತೀರ್ಣ 3-55 ಎಕ್ರೆ ಜಮೀನನ್ನು ಸದರಿ ತಾಲೂಕು ಕೊಟ್ಟೂರು ಪಟ್ಟಣದ ಬಿ.ಶಿವಮೂರ್ತಿ ತಂದೆ ಲೇಟ್ ನಾಗಪ್ಪ ಇವರಿಂದ ದಿನಾಂಕ 31-12-2014 ರಂದು ಡಾಕ್ಯುಮೆಂಟ್ ನಂಬರ್:3425/2014-15 ರ ಪ್ರಕಾರ ರೂ:2.05000/- ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ನೊಂದಣಿ ಮಾಡಿಸಿರುತ್ತೇನೆ. ಕಾರಣ ಸದರಿ ಕ್ರಯಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರ ಹೇಳಿಕೆಗಳನ್ನು ಕೇಳಿ ಸದರಿ ಜಮೀನಿನ ಬಗ್ಗೆ ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರ ವರದಿ ಮೇರೆಗೆ ಹಾಗೂ ದಾಖಲೆಗಳ ಆಧಾರದ ಮೇಲೆ ಕರ್ನಾಟಕ ಭೂಕಂದಾಯ ಕಾಯ್ದೇ 1964 ರ ಕಲಂ 128 ರ ಅಡಿಯಲ್ಲಿ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

**–:ಆದೇಶ:–**

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಜೋಳದಕೂಡ್ಲಿಗಿ ಗ್ರಾಮದ ಸನಂ 383ಬಿ. ವಿಸ್ತೀರ್ಣ 3–55 ಎಕ್ರೆ ಜಮೀನನ್ನು ದಿನಾಂಕ 31–12–2014 ರ ಡಾಕ್ಯುಮೆಂಟ್ ನಂಬರ್:3425/2014–15. ರ ಪ್ರಕಾರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗು ಕ್ರಯದಾರರಾದ ಎಂ.ಪ್ರಕಾಶ ತಂದೆ ಲೇಟ್ ಎಂ.ಮಲ್ಲಪ್ಪ ಕೊಟ್ಟೂರು ಪಟ್ಟಣ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳೀ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 07–06–2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ ಕೊಟ್ಟೂರು

ಇದರ ಪ್ರತಿಯನ್ನು:–

1) ಅರ್ಜಿದಾರರಾದ ಎಂ.ಪ್ರಕಾಶ ತಂದೆ ಲೇಟ್ ಎಂ.ಮಲ್ಲಪ್ಪ. ಬಿ.ಶಿವಮೂರ್ತಿ ತಂದೆ ಲೇಟ್ ನಾಗಪ್ಪ ಕೊಟ್ಟೂರು ಪಟ್ಟಣ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ಕಂದಾಯ ಪರಿವೀಕ್ಷಕರು ಕೊಟ್ಟೂರು ಇವರ ಮಾಹಿತಿಗಾಗಿ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.